ದಿ:29.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರ ಪರ ಶ್ರೀ. ಎಸ್.ವೈ ಎಸ್ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ನೀಡಿದ್ದೇನೆ ಅದರಲ್ಲಿ ಬರೆದ ವಿಷಯಗಳು ನಿಜವಿರುತ್ತವೆ ಮತ್ತು ಅವುಗಳ ಬಗ್ಗೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ಅದರ ಸಂಗತಿಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿದ್ದೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

| | | |
|---|---|---|
| 1 | ಸಿ.ಸಿ 2048/2024 ರ ತೀರ್ಪಿನ ದೃಢೀಕೃತ ನಕಲು | ನಿ.ಆರ್ -1 |
| 2 | ಸಿ.ಸಿ 2048/2024 ರಲ್ಲಿ ಫ್ರಾಸಾ- 1 ರವರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು | ನಿ.ಆರ್ -2 |
| 3 | ಸಿ.ಸಿ 2048/2024 ರಲ್ಲಿ ಫ್ರಾಸಾ- 2 ರವರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು | ನಿ.ಆರ್ -3 |
| 4 | ಸಿ.ಸಿ 2048/2024 ರಲ್ಲಿ ಫ್ರಾಸಾ-3 ರವರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು | ನಿ.ಆರ್ -4 |
| 5 | ಸಿ.ಸಿ 2048/2024 ರಲ್ಲಿ ಫ್ರಾಸಾ-4 ರವರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು | ನಿ.ಆರ್ -5 |
| 6 | ಸಿ.ಸಿ 2048/2024 ರಲ್ಲಿ ಫ್ರಾಸಾ- 5 ರವರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು | ನಿ.ಆರ್ -6 |
| 7 | ಸಿ.ಸಿ 2048/2024 ರಲ್ಲಿ ಫ್ರಾಸಾ- 6 ರವರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು | ನಿ.ಆರ್ -7 |
| 8 | ಸಿ.ಸಿ 2048/2024 ರಲ್ಲಿ ಫ್ರಾಸಾ- 7 ರವರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು | ನಿ.ಆರ್ -8 |

| | | |
|---|---|---|
| 9 | ಸಿ.ಸಿ 2048/2024 ರಲ್ಲಿ ಫ್ರಾಸಾ-8 ರವರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು | ನಿ.ಆರ್ -9 |
| 10 | ಸಿ.ಸಿ 2048/2024 ರಲ್ಲಿ ಫ್ರಾಸಾ-10 ರವರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು | ನಿ.ಆರ್ -10 |
| 11 | ಆಂಬುಲೆನ್ಸ ರಶೀದಿ | ನಿ.ಆರ್-11 |

<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಮ್.ಡಿ.ಐ ವಕೀಲರಿಂದ</u>

1) ನಾನು ಈಗಲೂ ಸಹ ಕೆ.ಎ 18/ಎಮ್. ಎ 8506 ವಾಹನದ ಮಾಲೀಕನಾಗಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ನಾನು ಹೇಳಿ ಬರೆಸಿದ್ದೇನೆ. ನಾನು ಕ್ರೈಮ್ ನಂಬರ್ 132/2024 ನಲ್ಲಿ ಸಾಕ್ಷಿಯಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

2) ಅಪಘಾತ ಆದ ನಂತರ ನನ್ನ ಕ್ರೇನ್ ನ ಆಪರೇಟರ್ ಗಾಯಾಳುವನ್ನು ಮೂಡಿಗೆಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದೆ. ನಂತರ ಗಾಯಾಳುವನ್ನು ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದೆ. ಗಾಯಾಳು ಗುಣಮುಖ ಆಗಿದ್ದರಿಂದ ಆತನನ್ನು ಆತನ ಸಂಬಂಧಿಕರ ವಶಕ್ಕೆ ನೀಡಿದ್ದೆ. ಗಾಯಾಳುವನ್ನು ವೆನಲಾಕ್ ಆಸ್ಪತ್ರೆಯಿಂದ ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಬರಲಾಗಿತ್ತು ಎಂದರೆ ಸರಿಯಲ್ಲ. ವೆನಲಾಕ್ ಆಸ್ಪತ್ರೆಯಲ್ಲಿ ಗಾಯಾಳು ಗುಣ ಮುಖನಾಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಬಳ್ಳಾರಿಯ ಮದರ್ಸ ಆಸ್ಪತ್ರೆಯಲ್ಲಿ ಆಪರೇಷನ್ ಆಗಿ ರಾಡ್ ಅಳವಡಿಸಲಾಗಿದೆ ಎಂದರೆ ಸಾಕ್ಷಿಯು ಅಪಘಾತದಲ್ಲಿ ಆದ ಗಾಯಗಳಿಗೆ ಆಪರೇಷನ್ ಆಗಿಲ್ಲ ಎಂದು ಹೇಳುತ್ತಾರೆ.

3) ನಾನು ಗಾಯಾಳುವಿನ ಸಂಪೂರ್ಣ ಆಸ್ಪತ್ರೆಯ ವೆಚ್ಚವನ್ನು ಬರೆಯಿಸಿಲ್ಲ ಎಂದರೆ ಸರಿಯಲ್ಲ. ನಾನು ಗಾಯಾಳುವಿನ ಸಂಬಂಧಿಕರ ಜೊತೆ ಮಾತನಾಡಿದ್ದೆ ಎಂದರೆ ಸರಿ. ನನ್ನ ಕ್ರೇನ್ ಗೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿ. ಅಪಘಾತ ಆದ ನಂತರ ನಾನು ನನ್ನ ವಾಹನಕ್ಕೆ ವಿಮೆ ಹಣವನ್ನು ಪಾವತಿ ಮಾಡಿದ್ದೇನೆ ಎಂದರೆ ಸರಿ. ನಾನು ಅರ್ಜಿದಾರರ

ಮೆಡಿಕಲ್ ದಾಖಲೆಗಳನ್ನು ಪರಿಶೀಲಿಸದೆ ಅರ್ಜಿದಾರನಿಗೆ ಆದ ಗಾಯಗಳು ಸಾದಾ ಸ್ವರೂಪದ ಗಾಯಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನು ನಡೆದುಕೊಂಡು ಹೋಗುವಾಗ ನನ್ನ ವಾಹನ ಚಾಲಕನೆ ವಾಹನವನ್ನು ಜೋರಾಗಿ ಮತ್ತು ಅಜಾಗರುಕತೆಯಿಂದ ನಡೆಸಿ ಅರ್ಜಿದಾರನಿಗೆ ಡಿಕ್ಕಿ ಪಡೆಸಿ ಅಪಘಾತ ಮಾಡಿದ್ದ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನದು ಸಾಮೀಲು ಇದೆ ಎಂದರೆ ಸರಿಯಲ್ಲ. ನಿಪಿ-11 ಅನ್ನು ನಾನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ರೂ.9,000/- ಎಂದು ತಿದ್ದಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಗಂಭೀರ ಗಾಯಗಳಾಗಿದ್ದರು ಸಹ ಮತ್ತು ಆತ ತನ್ನ ಚಿಕಿತ್ಸೆಗೆ ರೂ.6 ಲಕ್ಷ ಕ್ಕೂ ಹೆಚ್ಚಿಗೆ ಹಣ ಖರ್ಚು ಮಾಡಿದ್ದರು ಸಹ ಅರ್ಜಿದಾರನಿಗೆ ಪರಿಹಾರದ ಹಣ ಕೊಡುವುದನ್ನು ತಪ್ಪಿಸಿಕೊಳ್ಳಲು ನಾನು ಸುಳ್ಳು ಸಂಗತಿಗಳಿಂದ ಕೂಡಿದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿ ಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಅರ್ಜಿಯಲ್ಲಿ ಕೇಳಿರುವಂತೆ ಅರ್ಜಿದಾರರಿಗೆ ಪರಿಹಾರ ಕೊಡಲು ನಾನು ಭಾದ್ಯಸ್ತನೆಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .)

ಓ. ಹೇ. ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.